# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1255

2) ಮಾನ್ಯ ಸದಸ್ಯರ ಹೆಸರು : ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ)

3) ಉತ್ತರಿಸುವ ದಿನಾಂಕ : 22.09.2022

4) ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಬೆಂಗಳೂರು ನಗರ ಕೋಡಿಗೆಹಳ್ಳಿ ಪೊಲೀಸ್ ಠಾಣೆಯು ಕಿರಿದಾಗಿದ್ದು, ಸೌಕರ್ಯಗಳಲ್ಲದೆ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಇದರಿಂದಾಗಿ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಪರಿಹಾರದ ಕ್ರಮಗಳೇನು: | ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದರೆ ಕೊಡಿಗೇಹಳ್ಳಿ ಪೊಲೀಸ್ ಠಾಣೆಯು ಬೆಂಗಳೂರು ನಗರದ ಕೊಡಿಗೇಹಳ್ಳಿಯಲ್ಲಿರುವ ಬಾಬು ಜಗಜೀವನರಾಮ್ ಭವನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಇದು ಬಾಡಿಗೆ ಕಟ್ಟಡವಾಗಿರುತ್ತದೆ. ಪ್ರತಿ ತಿಂಗಳು ಬಿ.ಬಿ.ಎಂ.ಪಿ ರವರಿಗೆ ಇಲಾಖಾ ವತಿಯಿಂದ ಬಾಡಿಗೆಯನ್ನು ಪಾವತಿಸಲಾಗುತ್ತಿರುತ್ತದೆ. ಇದು ಕಿರಿದಾಗಿದ್ದರೂ ಕೂಡಾ ಮೂಲ ಸೌಕರ್ಯಗಳು ಇರುತ್ತದೆ. |
| ಆ. | ವಾರ್ಡ್ ನಂ/8 ರಲ್ಲಿ ಅನೇಕ ಸಿ.ಎ ನಿವೇಶನ ಮತ್ತು ಸರ್ಕಾರಿ ಜಾಗಗಳಿದ್ದು ಅಲ್ಲಿ ಪೊಲೀಸ್‌ಠಾಣೆ ನಿರ್ಮಿಸಲು ಇರುವ ಅಡೆ-ತಡೆಗಳನ್ನು ನಿವಾರಿಸಿ ಯಾವ ಕಾಲಮಿತಿಯೊಳಗೆ ಸ್ವಂತ ಕಟ್ಟಡವನ್ನು ಕಲ್ಪಿಸಿ ಕೊಡಲಾಗುವುದು : | ಕೊಡಿಗೇಹಳ್ಳಿ ಪೊಲೀಸ್ ಠಾಣಾ ಕಟ್ಟಡಕ್ಕೆ ಜಮೀನಿನ ಅವಶ್ಯಕತೆ ಇರುವುದರಿಂದ ಪೊಲೀಸ್ ಠಾಣಾ ಕಟ್ಟಡ ನಿರ್ಮಾಣಕ್ಕಾಗಿ ಕೋತಿಹೊಸಹಳ್ಳಿ ಗ್ರಾಮದ ಸರ್ವೆ ನಂ.33/3, 4 ಮತ್ತು 34/1, 2 ರಲ್ಲಿನ 1163.64 ಚದರ ಮೀಟರ್‌ಗಳ ಪೈಕಿ 4050 ಚದರ ಮೀಟರ್ ಜಾಗವನ್ನು ಮಂಜೂರು ಮಾಡುವಂತೆ ಆಯುಕ್ತರು, ಬಿ.ಡಿ.ಎ ರವರಿಗೆ ದಿನಾಂಕ:14/03/2022 ರಂದು ಪತ್ರ ಬರೆಯಲಾಗಿರುತ್ತದೆ. |
| ಇ. | ಕೋಡಿಗೆಹಳ್ಳಿ ಪೊಲೀಸ್ ಠಾಣೆಯವರು ಜಪ್ತಿ ಮಾಡಿ ವಶಪಡಿಸಿಕೊಂಡಿರುವ ವಾಹನಗಳನ್ನು ಕೋಡಿಗೆಹಳ್ಳಿಯ ಮುಖ್ಯರಸ್ತೆಯ ಎರಡು ಬದಿಗಳಲ್ಲಿ ನಿಲ್ಲಿಸಿರುವುದರಿಂದ, ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಲು ಯಾವ ಕಾಲಮಿತಿಯೊಳಗೆ ಕ್ರಮವಹಿಸಲಾಗುವುದು? | ಕೊಡಿಗೇಹಳ್ಳಿ ಪೊಲೀಸ್ ಠಾಣೆಯಲ್ಲಿ ಜಪ್ತಿ ಮಾಡಿ ವಶಪಡಿಸಿಕೊಂಡಿರುವ ವಾಹನಗಳನ್ನು ಕೊಡಿಗೇಹಳ್ಳಿಯ ಮುಖ್ಯ ರಸ್ತೆಯ ಎರಡು ಬದಿಗಳಲ್ಲಿ ನಿಲ್ಲಿಸಿರುವುದಿಲ್ಲ. ಈ ಬಗ್ಗೆ ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗುತ್ತಿರುವುದಿಲ್ಲ. |

**ಸಂಖ್ಯೆ: ಹೆಚ್‌ಡಿ 91 ಪಿಬಿಎಲ್ 2022**

(ಆರಗ ಜ್ಞಾನೇಂದ್ರ)
ಗೃಹ ಸಚಿವರು